**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.**
**ಕುಂದಾಪುರ**

ಸಿ.ಸಿ. ನಂಬ್ರ: **18/2018**
ಸಿ.ಡಬ್ಲ್ಯೂ **15**
ಪಿ.ಡಬ್ಲ್ಯೂ-**7**

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಘವ ಎಸ್. ಪಡಿನ್ |
| ತಂದೆಯ ಹೆಸರು | : | ದಿ. ಸೀತಾರಾಮ ಎಸ್ ಪಡಿನ್ |
| ಪ್ರಾಯ | : | 62 ವರ್ಷ |
| ಉದ್ಯೋಗ | : | ನಿವೃತ್ತ ಪಿ.ಐ. |
| ವಾಸ | : | ಮಂಗಳೂರು |

ದಿನಾಂಕ: 17-07-2025 ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಹಕರಿಂದ

ನಾನು ಸೆಪ್ಟೆಂಬರ್-2015 ರಿಂದ ಅಕ್ಟೋಬರ್ 2017 ರವರೆಗೆ ಬೈಂದೂರು ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ದಿನಾಂಕ: 29-09-2017 ರಂದು ಕಡತವನ್ನು ಚಾಸಾ-14 ರವರಿಂದ ಪಡೆದು ಅದೇ ದಿನ ಕುಂದಾಪುರ ತಾಲೂಕು ಸರ್ಕಾರಿ ಆಸ್ಪತ್ರೆಗೆ ಭೇಟಿಕೊಟ್ಟು, ಮೃತನ ತಂದೆ ಗಣಪತಿ ಶ್ರೀಯಾನ್ ರವರು ಮೃತನಾದ ಪ್ರವೀಣನ ದೇಹವನ್ನು ಚಾಸಾ-4 ರಿಂದ ಚಾಸಾ-5 ರವರ ಸಮಕ್ಷಮ ಗುರುತಿಸಿದ್ದು, ಸಮಯ 7-00 ಗಂಟೆಯಿಂದ 9-00 ಗಂಟೆಯವರೆಗೆ ಶವ ತನಿಖಾ ಮಹಜರನ್ನು ಜರುಗಿಸಿ ಶವವನ್ನು ಸಿಬ್ಬಂದಿಗಳಿಗೆ ವಹಿಸಿ ಸೂಕ್ತ ದಾಖಲೆಗಳ ಮೇಲೆ ಕುಟಂಬದವರಿಗೆ ವಹಿಸುವಂತೆ ತಿಳಿಸಿರುತ್ತೇನೆ. ಸದರ ಮಹಜರನ್ನು ಸಮ್ಮತಿಯ ಮೇರೆಗೆ ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

3. ತದನಂತರ ತಕ್ಷೀರು ಸ್ಥಳವಾದ ಕುಂದಾಪುರ ತಾಲೂಕು ಇಡೂರು ಕುಂಜ್ಞಾಡಿ ಗ್ರಾಮದ

ಜನ್ನಾಲ ಕುಕ್ಕುಡ ಕ್ರಾಸ ಬಳಿ ಹೋಗಿ ಫಿರ್ಯಾದುದಾರರಾದ ಚಂದನರವರು ಜಸಿಹಾಜರಿದ್ದು ಅವರು ಸ್ಥಳ ತೋರಿಸಿದಂತೆ ಸ್ಥಳದಲ್ಲಿ ಪಂಚರಾದ ಚಾಸಾ-2 ಹಾಗೂ ಚಾಸಾ-3 ರವರ ಸಮಕ್ಷಮ ಸಮಯ 10-00 ರಿಂದ 10-45 ರವರೆಗೆ ಸ್ಥಳ ಮಹಜರು ಮಾಡಿ ಸ್ಥಳದಲ್ಲೆ ಫೋಟೋವನ್ನು ತೆಗೆದು ಸ್ಥಳ ನಕಾಶೆಯನ್ನು ತೆಗೆಸಿರುತತೆೇನೆ. ಸದರಿ ಮಹುರು ಫೋಟೋ ಹಾಗೂ ನಕಾಶೆಯನ್ನು ನಿಪಿ-2 ರಿಂದ ನಿಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2 ಡಿ, ನಿಪಿ-3 ಎ ಮತ್ತು ನಿಪಿ-4 ಡಿ ಎಂದು ಗುರುತಿಸಲಾಯಿತು. ಮಹಜರು ಸಮಯದಲ್ಲಿ ಬಸ್ಸನ್ನು ಜಪ್ತುಮಾಡಿಕೊಂಡಿರುತ್ತೇನೆ.

4. ದಿಃ 02-10-2017 ರಂದು ಕೆಎ-01/ಎಸಿ-9923 ರ ಜಿಪಿಎ ಮಾಲೀಕರಾದ ಚಾಸಾ-11 ರವರು ಠಾಣೆಗೆ ಹಾಜರಾದ್ದಂತೆ ಅವರಿಗೆ ಕಲಂ. 133 ರಂತೆ ನೋಟಿಸನ್ನು ಕೊಟ್ಟು ಉತ್ತರವನ್ನು ಪಡೆದುಕೊಂಡು ಅವರಿಂದ ಇಂಡೆಮನಿಟಿ ಬಾಂಡ ಪಡೆದು ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ಸದರಿ ನೋಟಿಸು ಮತ್ತು ಉತ್ತರವನ್ನು ನಿಪಿ-12 ಮತ್ತು ನಿಪಿ-13 ಎಂದು ಗುರ ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಮತ್ತು ನಿಪಿ-13 ಬಿ ಎಂದು ಗುರುತಿಸಲಾಯಿತು. ಇಂಡೆಮನಿಟಿ ಬಾಂಡನ್ನು ನಿಪಿ-14 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-14 ಎ ಎಂದು ಗುರುತಿಸಲಾಯಿತು. ಸದರಿ ವಾಹನದಲ್ಲಿ ಚಾಲಕನಾಗಿ ಜಗದೀಶ ಎಂಬ ವ್ಯಕ್ತಿ ಇದ್ದ ಎಂದು ತಿಳಿಸಿ ಅವರನ್ನು ಹಾಜರುಪಡಿಸಿದ್ದು, ಆತನನ್ನು ನಿಪಿ-11 ರಂತೆ ದಸ್ತಗಿರಿ ಮಾಡಿ ಆತನನ್ನು ದಸ್ತಗಿರಿ ನಿಯಮ ಪಾಲಿಸಿ ಯೋಗ್ಯ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿ ನಿಪಿ-11 ರಲ್ಲಿರುವ ತನ್ನ ಸಹಿಯನ್ನು ನಿಪಿ-11 ಸಿ ಎಂದು ಗುರುತಿಸಿರುತ್ತಾರೆ.

5. ಚಾಸಾ-2 ಮತ್ತು ಚಾಸಾ-3 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ವರದಿಯನ್ನು ನಿಪಿ-10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-10 ಎ ಎಂದು ಗುರುತಿಸಲಾಯಿತು. ವರ್ಗಾವಣೆಗೊಂಡಿದ್ದರಿಂದ ಕಡತವನ್ನು ಚಾಸಾ-16 ರವರಿಗೆ ವಹಿಸಿರುತ್ತೇನೆ.

<u>ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಪಿ ಕೆ ವಕೀಲರಿಂದ</u>

1. ಚಾಸಾ-11 ರವರು ಸಾಕಷ್ಟು ವಾಹನಗಳ ಮಾಲೀಕರಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಚಾಸಾ-11 ರವರ ಕಚೇರಿಯಲ್ಲಿ ಅಪಘಾತದ ದಿನದಂದು ಯಾವ ಬಸ್ಸಿಗೆ ಯಾವ ಚಾಲಕ ನನೇಮಿಸಿದ್ದ ಮೇರೆಗೆ ಅವರ ಕಚೇರಿಯಿಂದ ದಾಖಲೆಯನ್ನು ಪಡೆದಿರವುದಿಲ್ಲಸಿ ಸಾಪ್ವಿ ಅವರೇ

ಹಾಜರುಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಆ ದಿನ ನಾನು ಹೇಳಿದ ಹಾಗೇ ಚಾಸಾ-11 ರವರು ಆರೋಪಿತನೇ ಬಸ್ಸಿನ ಚಾಲಕನಿದ್ದನು ಎಂಬುದರ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಶವ ತನಿಖಾ ಮಹಜರು ಹಾಗೂ ಸಾಕ್ಷಿಯ ಹೇಳಿಕೆಯನ್ನು ಠಾಣೆಯಲ್ಲೆ ಕುಳಿತು ತಯಾರಿಸಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-4 ರ ನಾಕಶೆಯನ್ನು ಠಾಣೆಯಲ್ಲೆ ರಚಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ಸ್ಥಳ ತೆಗೆಸಿದ ಪೋಟೊವಲ್ಲ, ಈ ಪ್ರಕರಣಕ್ಕಾಗಿ ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-4 ಸ್ಥಳದ ಸ್ಥಿತಿಗತಿಗೆ ಅನುಗುಣವಾಗಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಚಾಸಾ-11 ರವರು ಕಲಂ. 133 ರ ನೋಟಿಸಿಗೆ ಉತ್ತರ ಕೊಟ್ಟಿರುವುದಿಲ್ಲ. ಅದನ್ನು ನಾನೇ ಬರೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**